

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08–07–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

(ಹಝ್ರತ್ ಅಬೂಬಕರ್[ರ]ರ ಕಾಲಘಟ್ಟದಲ್ಲಿ ಧರ್ಮತ್ಯಾಗಿಗಳಾದ ದಂಗೆಗಾರರ ವಿರುದ್ಧ ಕಾರ್ಯಾಚರಣೆಯ ಪ್ರಸ್ತಾಪಕ್ಕೆ ಸಂಬಂಧಿಸಿ ಹನ್ನೊಂದನೇ ಕಾರ್ಯಾಚರಣೆಯ ಕುರಿತು ಖಲೀಫತುಲ್ ಮಸೀಹರು ಹೀಗೆ ಹೇಳಿದರು:)

ಹಝ್ರತ್ ಅಬೂಬಕರ್[ರ] ಒಂದು ಧ್ವಜವನ್ನು ಹಝ್ರತ್ ಮುಹಾಜಿರ್ ಬಿನ್ ಅಬೂ ಉಮಯ್ಯ[ರ]ರಿಗೆ ನೀಡುತ್ತಾ ಅಸ್ವದ್ ಅನ್ಸಿಯ ಸೈನ್ಯವನ್ನು ಎದುರಿಸಲು ಮತ್ತು ಖೈಸ್ ಬಿನ್ ಮಕ್‌ಶೂಹ್ ಮತ್ತು ಇತರ ಯಮನ್ ನಿವಾಸಿಗಳೊಡನೆ ಹೋರಾಡುತ್ತಿದ್ದ ಅಬ್ನಾರಿಗೆ ನೆರವು ನೀಡಲು ಆದೇಶ ನೀಡಿದರು. ಅಲ್ಲಿನ ಕೆಲಸ ಮುಕ್ತಾಯಗೊಳಿಸಿದ ನಂತರ ಕಿಂದ ಗೋತ್ರವನ್ನು ಎದುರಿಸಲಿಕ್ಕಾಗಿ ಹಝ್ರೇ ಮೌತಿಗೆ ಹೋಗಲು ನಿರ್ದೇಶನ ನೀಡಿದರು.

ಹಝ್ರತ್ ಮುಹಾಜಿರ್ ಬಿನ್ ಉಮಯ್ಯ[ರ] ಉಮ್ಮುಲ್ ಮುಅ್‌ಮಿನೀನ್ ಹಝ್ರತ್ ಉಮ್ಮೇ ಸಲ್ಮಾ[ರ]ರ ಸಹೋದರನಾಗಿದ್ದರು. ತಬೂಕ್ ಯುದ್ಧದಿಂದ ಹಿಂದೆ ಉಳಿದಿದ್ದ ಕಾರಣದಿಂದ ಅವರೊಂದಿಗೆ ಹಝ್ರತ್ ಪೈಗಂಬರ್[ಸ]ರಿಗೆ ಇದ್ದ ಅಸಂತುಷ್ಟಿ ದೂರವಾದಾಗ ಅವರನ್ನು ಹಝ್ರತ್ ಪೈಗಂಬರ್[ಸ] ಕಿಂದದ ಅಧಿಕಾರಿಯನ್ನಾಗಿ ಮಾಡಿದ್ದರು. ಆದರೆ ಅವರು ರೋಗಿಯಾದ ಕಾರಣದಿಂದ ಅಲ್ಲಿಗೆ ಹೋಗಲು ಸಾಧ್ಯವಾಗದೇ ಹೋದಾಗ ಅವರು ಝಿಯಾದ್[ರ]ರೊಡನೆ ಅವರಿಗಾಗಿ ಅವರಿಗೆ ಒಪ್ಪಿಸಲಾದ ಕೆಲಸವನ್ನು ಕೂಡ ಮಾಡಲು ಪತ್ರ ಬರೆದರು. ಅನಂತರ ಹಝ್ರತ್ ಅಬೂಬಕರ್[ರ] ಅವರನ್ನು ನಜ್ರಾನಿನಿಂದ ಯಮನಿನ ಗಡಿ ಪ್ರದೇಶದ ವರೆಗಿನ ಅಧಿಕಾರಿಯನ್ನಾಗಿ ಮಾಡಿದರು ಮತ್ತು ಯುದ್ಧ ಮಾಡಲು ಆದೇಶಿಸಿದರು.

ಇಬ್ಬರು ಸುಳ್ಳು ಪ್ರವಾದಿಗಳು (ಸುನ್‌ಅದವನಾದ ಅಸ್ವದ್ ಅನ್ಸಿ ಮತ್ತು ಯಮಾಮದ ಮುಸೈಲಿಮ ಕಧ್ಧಾಬ್) ಬರುವರು ಎಂದು ಹಝ್ರತ್ ಪೈಗಂಬರ್[ಸ]ರಿಗೆ ಕನಸಿನಲ್ಲಿ ಮೊದಲೇ ತಿಳಿಸಲಾಗಿತ್ತು ಎಂದು ಬುಖಾರಿಯಲ್ಲಿ ವರದಿಯಿದೆ.

ಹಝ್ರತ್ ಪೈಗಂಬರ್[ಸ] ಇರಾನಿನ ಅರಸನಾದ ಕಿಸ್ರನನ್ನು ಇಸ್ಲಾಮಿಗೆ ಆಹ್ವಾನಿಸುತ್ತಾ ಪತ್ರ ಬರೆದಾಗ ಅವನು ಕೋಪಗೊಂಡು, ಹಝ್ರತ್ ಪೈಗಂಬರ್[ಸ]ರ ತಲೆಯನ್ನು ತೆಗೆದುಕೊಂಡು ಅರಮನೆಗೆ ಬರಲು ತನ್ನ ಅಧೀನದಲ್ಲಿದ್ದ ಯಮನಿನ ಅಧಿಕಾರಿಯಾದ ಬಾಝಾನಿಗೆ ಆದೇಶ ನೀಡಿದನು. ಅವನು ಇಬ್ಬರು ವ್ಯಕ್ತಿಗಳನ್ನು ಹಝ್ರತ್ ಪೈಗಂಬರ್[ಸ]ರ ಬಳಿಗೆ ಕಳುಹಿಸಿದನು. ಆದರೆ ಅವರು ಮದೀನ ತಲಪಿದಾಗ ಅವರೊಡನೆ ಹಝ್ರತ್ ಪೈಗಂಬರ್[ಸ] ಹೀಗೆ ಹೇಳಿದರು: ನಿಮ್ಮ ಅರಸನನ್ನು ಅವನ ಮಗನಾದ ಶೀರೋಯ ವಧಿಸಿದ್ದಾನೆ ಮತ್ತು ಅವನ ಸ್ಥಾನದಲ್ಲಿ ಸ್ವತಃ ಅರಸನಾಗಿ ಕುಳಿತುಕೊಂಡಿದ್ದಾನೆ ಎಂದು ನನ್ನ ಅಲ್ಲಾಹನು ನನಗೆ ತಿಳಿಸಿರುವನು. ಅದರೊಂದಿಗೆ ಬಾಝಾನಿಗೆ ಇಸ್ಲಾಮಿನ ಸಂದೇಶವನ್ನು ನೀಡುತ್ತಾ ಹಝ್ರತ್ ಪೈಗಂಬರ್[ಸ] ಹೀಗೆ ತಿಳಿಸಿದರು: ಅವನು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದರೆ, ಅವನನ್ನು ಹಿಂದಿನಂತೆ ಯಮನಿನ ಅಧಿಕಾರಿಯನ್ನಾಗಿ ಇರಿಸಲಾಗುವುದು. ನಂತರ ಆ ಇಬ್ಬರು ವ್ಯಕ್ತಿಗಳು ಮರಳಿ ಹೋದರು, ಬಾಝಾನನಿಗೆ ಎಲ್ಲ ಸಂಗತಿಗಳನ್ನು ಹೇಳಿಕೊಟ್ಟರು. ಅದೇ ವೇಳೆ ಹಝ್ರತ್ ಪೈಗಂಬರ್[ಸ] ಹೇಳಿದಂತೆ ನಡೆಯಿತು ಎಂಬ ಸುದ್ದಿ ಬಾಝಾನಿಗೆ ಲಭಿಸಿತು. ಈ ಮಾತು ಈಡೇರಿರುವುದನ್ನು ಕಂಡಾಗ, ಬಾಝಾನ್ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದನು. ಹಝ್ರತ್ ಪೈಗಂಬರ್[ಸ] ಅವನನ್ನು ಯಮನಿನ ಅಧಿಕಾರ ಸ್ಥಾನದಲ್ಲಿ ನೆಲೆನಿಲ್ಲಿಸಿದರು.

ಬಾಝಾನ್ ಮೃತಪಟ್ಟಾಗ ಹಝ್ರತ್ ಪೈಗಂಬರ್[ಸ] ತನ್ನ ಅಮೀರರನ್ನು ಯಮನಿನ ವಿವಿಧ ಪ್ರದೇಶಗಳ ಅಧಿಕಾರಿಗಳನ್ನಾಗಿ ಮಾಡಿದರು. ಯಮನಿನ ದಕ್ಷಿಣ ಭಾಗದಲ್ಲಿ ನೆಲೆಸಿದ್ದ ಕಣಿಗಾರನಾದ ಅಸ್ವದ್ ತನ್ನ ಜಾದೂಗಾರಿಕೆ ಮತ್ತು ಕಾವ್ಯ ರೀತಿಯ ಮಾತುಗಾರಿಕೆಯಿಂದ ಬೇಗನೇ ಜನರ ಗಮನವನ್ನು ತನ್ನ ಕಡೆಗೆ ಸೆಳೆದಿದ್ದನು ಮತ್ತು ಪ್ರವಾದಿತ್ವದ ವಾದವನ್ನು ಕೂಡ ಮಾಡಿದ್ದನು. ಇದರಿಂದ ಮೂಢರಾದ ಸಾಮಾನ್ಯ ಜನರಲ್ಲಿ ಅನೇಕರು ಅವನ ಸುತ್ತ ಒಟ್ಟುಗೂಡಿದರು. ಯಮನ್ ಕೇವಲ ಯಮನ್ ನಿವಾಸಿಗಳದ್ದಾಗಿದೆ ಎಂಬ ಘೋಷಣೆಯನ್ನು ಕೂಡ ಅವನು ಕೂಗಿದ್ದನು. ಇದರಿಂದ ಯಮನಿನ ನಿವಾಸಿಗಳು ಕೋಮುವಾದದ ಈ ಘೋಷಣೆಯಿಂದ ಬಹಳ ಪ್ರಭಾವಿತರಾದರು.

(ಹುಝೂರ್ ಹೇಳಿದರು:) ಇದು ಬಹಳ ಪ್ರಾಚೀನವಾದ ಘೋಷಣೆಯಾಗಿದೆ. ಆದರೆ ಈಗಲೂ ಇದನ್ನೇ ಉಪಯೋಗಿಸಲಾಗುತ್ತದೆ. ಲೋಕದಲ್ಲಿ ಹರಡಿರುವ ಗಲಭೆ ಇದೇ ಕಾರಣದಿಂದಾಗಿದೆ.

ಈ ಚಿಂತಾಜನಕ ಮಾಹಿತಿಗಳು ಮದೀನಕ್ಕೆ ತಲುಪಿದ ಸಮಯದಲ್ಲಿ, ಮೌತಾ ಯುದ್ಧದಲ್ಲಿ ಹುತಾತ್ಮರಾದವರಿಗಾಗಿ ಪ್ರತೀಕಾರ ಮಾಡಲು ಮತ್ತು ಉತ್ತರ ದಿಕ್ಕಿನಿಂದ ಬರುವ ದಾಳಿಗಳನ್ನು ತಡೆಯಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸಾಮ ಬಿನ್ ಝೈದ್‌ರ ಸೈನ್ಯವನ್ನು ತಯಾರಿಸುವುದರಲ್ಲಿ ನಿರತರಾಗಿದ್ದರು. ಸ್ವತಃ ಅಸ್ವದಿನ ವಿರುದ್ಧದ ಹೋರಾಟವನ್ನು ಜಾರಿಯಲ್ಲಿರಿಸಲು ಯಮನಿನ ಸರದಾರರಿಗೆ ಹಝ್ರತ್ ಪೈಗಂಬರ್(ಸ) ಪತ್ರ ಬರೆದರು ಮತ್ತು ಉಸಾಮನ ಸೈನ್ಯ ವಿಜಯಶಾಲಿಯಾಗಿ ಮರಳಿದ ಕೂಡಲೇ ಅದನ್ನು ಯಮನಿನ ಕಡೆಗೆ ಕಳುಹಿಸಲಾಗುವುದು ಎಂದು ಹೇಳಿದರು.

ಅದೇ ವೇಳೆ ಹಝ್ರೇ ಮೌತ್ ಮತ್ತು ಯಮನಿನ ಮುಸ್ಲಿಮರಿಗೆ ಹಝ್ರತ್ ಪೈಗಂಬರ್(ಸ)ರ ಪತ್ರ ಲಭಿಸಿತು. ಅದರಲ್ಲಿ ಅಸ್ವದ್ ಅನ್ಸಿಯೊಡನೆ ಯುದ್ಧ ಮಾಡಲು ಆದೇಶ ನೀಡಲಾಗಿತ್ತು. ಆದ್ದರಿಂದ ಈ ಉದ್ದೇಶಕ್ಕಾಗಿ ಹಝ್ರತ್ ಮುಆಧ್ ಬಿನ್ ಜಬಲ್(ರ) ಎದ್ದುನಿಂತರು. ಇದರಿಂದ ಮುಸ್ಲಿಮರ ಹೃದಯಗಳು ಬಲಗೊಂಡುವು. ಜುಶೈಶ್ ದೈಲಮಿ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಪತ್ರವನ್ನು ತೆಗೆದುಕೊಂಡು ವಬರ್ ಬಿನ್ ಯುಹನ್ನಿಸ್(ರ) ನಮ್ಮ ಬಳಿಗೆ ಬಂದರು. ನಾವು ನಮ್ಮ ಧರ್ಮದಲ್ಲಿ ಸ್ಥಿರರಾಗಿರಲು ಮತ್ತು ಹೋರಾಟ ಅಥವಾ ತಂತ್ರದಿಂದ ಅಸ್ವದ್ ಅನ್ಸಿಯ ವಿರುದ್ಧ ಯುದ್ಧ ಕಾರ್ಯಾಚರಣೆ ನಡೆಸಲು ಹಾಗೂ ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ಇಸ್ಲಾಮಿನಲ್ಲಿ ಸ್ಥಿರರಾಗಿರುವ ಮತ್ತು ಧರ್ಮದ ನೆರವಿಗಾಗಿ ತಯಾರಾಗಿರುವ ಜನರಿಗೆ ತಲುಪಿಸಲು ಆ ಪತ್ರದಲ್ಲಿ ಆದೇಶ ನೀಡಲಾಗಿತ್ತು. ನಾವು ಅದನ್ನು ಪಾಲಿಸಿದೆವು. ಆದರೆ ಅಸ್ವದ್ ಅನ್ಸಿಯ ವಿರುದ್ಧ ವಿಜಯ ಸಾಧಿಸುವುದು ಬಹಳ ಕಷ್ಟಕರವೆಂದು ನಮಗೆ ಗೊತ್ತಾಯಿತು.

ಜುಶೈಶ್ ದೈಲಮಿ ಹೇಳುತ್ತಾರೆ: ಅಸ್ವದ್ ಅನ್ಸಿ ಮತ್ತು ಅಮ್ರ್ ಬಿನ್ ಮಅ್‌ದಿಯ ಸಹೋದರಿ ಪುತ್ರನಾದ ಖೈಸ್ ಬಿನ್ ಅಬ್ದ್ ಯಗೂಶ್ ಬಿನ್ ಮಕ್‌ಶೂಹ್‌ನ ನಡುವೆ ಸ್ವಲ್ಪ ಒಡಕು ಉಂಟಾಗಿದೆ ಎಂದು ನಮಗೆ ತಿಳಿದುಬಂತು. ಅವನ ಜೀವಕ್ಕೆ ಅಪಾಯವಿದೆ ಎಂಬುದನ್ನು ಯೋಚಿಸಿ ನಾವು ಅವನನ್ನು ಇಸ್ಲಾಮಿನ ಕಡೆಗೆ ಆಹ್ವಾನಿಸಿದೆವು ಮತ್ತು ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ಆತನಿಗೆ ತಲುಪಿಸಿದೆವು. ನಾವು ಆಕಾಶದಿಂದ ಇಳಿದು ಬಂದೆವೋ ಎಂಬಂತೆ ಅವನಿಗೆ ಅನುಭವವಾಯಿತು. ಆದ್ದರಿಂದ ಬೇಗನೇ ಅವನು ನಮ್ಮ ಮಾತನ್ನು ಒಪ್ಪಿಕೊಂಡನು. ಅದರೊಂದಿಗೆ ನಾವು ಇತರ ಜನರೊಡನೆ ಕೂಡ ಪತ್ರ ವ್ಯವಹಾರ ನಡೆಸಿದೆವು. ವಿವಿಧ ಗೋತ್ರಗಳ ನಾಯಕರು ಕೂಡ ಅಸ್ವದ್ ಅನ್ಸಿಯನ್ನು ಎದುರಿಸಲು ತಯಾರಾಗಿದ್ದರು. ಅದೇ ರೀತಿಯಲ್ಲಿ ನಜ್ರಾನಿನ ಎಲ್ಲ ನಿವಾಸಿಗಳಿಗೆ ಅಸ್ವದ್ ಅನ್ಸಿಯ ವಿಷಯದ ಕುರಿತು ಹಝ್ರತ್ ಪೈಗಂಬರ್(ಸ) ಬರೆದಿದ್ದರು. ಅವರೆಲ್ಲರೂ ಹಝ್ರತ್ ಪೈಗಂಬರ್(ಸ)ರ ಮಾತನ್ನು ಒಪ್ಪಿಕೊಂಡರು. ಈ ಮಾಹಿತಿ ಅಸ್ವದ್ ಅನ್ಸಿಗೆ ತಲುಪಿದಾಗ ಅವನಿಗೆ ತನ್ನ ನಾಶದ ಅರಿವಾಗಲು ಶುರುವಾಯಿತು.

ಜುಶೈಶ್ ದೈಲಮಿಗೆ ಒಂದು ಉಪಾಯ ಹೊಳೆಯಿತು. ಅವರು ಅಸ್ವದ್ ಅನ್ಸಿಯ ಪತ್ನಿಯಾದ ಆಝಾದಿನ ಬಳಿಗೆ ಹೋದರು. ಅಸ್ವದಿನ ಕೈಗಳಿಂದ ಅವಳ ಹಿಂದಿನ ಪತಿಯಾದ ಹಝ್ರತ್ ಶಹರ್ ಬಿನ್ ಬಾಝಾನ್(ರ) ಹುತಾತ್ಮರಾದದ್ದು, ಅವಳ ಕುಟುಂಬದ ಇತರ ಸದಸ್ಯರು ವಧಿಸಲ್ಪಟ್ಟದ್ದು ಮತ್ತು ಕುಟುಂಬಕ್ಕೆ ಉಂಟಾದ ಅವಮಾನ ಹಾಗೂ ದೌರ್ಜನ್ಯಗಳ ಬಗ್ಗೆ ಅವಳಿಗೆ ನೆನಪಿಸಿ ಕೊಟ್ಟರು ಮತ್ತು ಅಸ್ವದ್ ಅನ್ಸಿಯ ವಿರುದ್ಧ ಸಹಾಯಕ್ಕಾಗಿ ಬೇಡಿಕೊಂಡರು. ಆಗ ಅವಳು ಬಹಳ ಸಂತೋಷದಿಂದ ಅದಕ್ಕೆ ತಯಾರಾದಳು. ಕೊನೆಗೆ ಒಂದು ಸಂಪೂರ್ಣ ಯೋಜನೆ ಮತ್ತು ಆಝಾದಳ ಸಹಾಯದೊಂದಿಗೆ ಅಸ್ವದ್ ಅನ್ಸಿಯನ್ನು ಒಂದು ರಾತ್ರಿ ಅವನ ಅರಮನೆಗೆ ನುಗ್ಗಿ ವಧಿಸಲಾಯಿತು. ಈ ರೀತಿಯಾಗಿ ಮೂರು ತಿಂಗಳ ತನಕ ಅಥವಾ ನಾಲ್ಕು ತಿಂಗಳ ವರೆಗೆ ಹೊತ್ತಿದ ಈ ಪಿತೂರಿ ನಂದಿ ಹೋಯಿತು.

ಅನಂತರ ಸುನ್‌ಅದಲ್ಲಿ ಮೊದಲಿನಂತೆ ಮುಸ್ಲಿಮರ ಆಡಳಿತ ಸ್ಥಾಪಿತಗೊಂಡಿತು. ಆದರೆ ಯಮನಿನಲ್ಲಿ ಪುನಃ ಒಂದು ಬಾರಿ ದಂಗೆಯೆದ್ದಿತು. ಹಝ್ರತ್ ಪೈಗಂಬರ್(ಸ) ನಿಧನರಾದ ಚರ್ಚೆ ನಡೆದಾಗ ಸುಧಾರಿಸುತ್ತಾ ಇದ್ದ ಅವಸ್ಥೆಗಳು ಪುನಃ ಹಾಳಾಯಿತು. ಬಲಾಢ್ಯನೂ ತೀವ್ರ ಕೋಮುವಾದಿಯೂ ಆದ ಖೈಸ್ ಬಿನ್ ಅಬ್ದ್ ಯಗೂಸ್ ಪುನಃ ಇಸ್ಲಾಮಿನೊಂದಿಗೆ ಇರಿಸಿದ್ದ ನಿಷ್ಠೆಯಿಂದ ಮುಖ ತಿರುಗಿಸಿದನು. ಯಮನಿನಲ್ಲಿ ಇರಾನಿಯರ ಅಧಿಕಾರವು ಅವನನ್ನು ಚಿಂತಿತಗೊಳಿಸುತ್ತಿತ್ತು. ಅದನ್ನು ಕೊನೆಗೊಳಿಸಿದ ನಂತರ ಅಬ್ನಾಅರ ಕ್ಷೇಮ, ಅವರ ಒಗ್ಗಟ್ಟು ಹಾಗೂ ಅಧಿಕಾರದ ಮೇಲುಗೈಯನ್ನು ಮಣ್ಣುಪಾಲುಗೊಳಿಸಲು ಅವನು ಬಯಸುತ್ತಿದ್ದನು. ಅವನು ಮೊದಲೇ ಒಬ್ಬ ಯಶಸ್ವಿ ಸೇನಾಧಿಪತಿಯಾಗಿದ್ದನು. ಅವನು ಅಸ್ವದಿನ ಸೇನಾಧಿಪತಿಗಳೊಂದಿಗೆ ಒಳಸಂಚು ಮಾಡಿದನು ಮತ್ತು ಅಬ್ನಾಅರನ್ನು ದೇಶದಿಂದ ಹೊರಗೆ ಹಾಕಲು ಯೋಜನೆ ಮಾಡಿಕೊಂಡನು. ಫೀರೋಝ್ ಮತ್ತು ದಾಧ್‌ವಿಯ ಇಬ್ಬರೊಂದಿಗೂ ಅವನು ಸಂಬಂಧವನ್ನು ಹಾಳುಗೊಳಿಸಿದನು. ದಾಧ್‌ವಿಯನನ್ನು ಮೋಸದಿಂದ ಅವನು ಕೊಲೆ ಮಾಡಿದನು. ಆದರೆ ಫೀರೋಝ್ ಕೂದಲು ಅಂತರದಲ್ಲಿ ಪರಾರಿಯಾದನು. ತನ್ನ ಮತ್ತು ಅಬ್ನಾಅರ ನಿಷ್ಠೆಯ ಕುರಿತು ತಿಳಿಸಿಕೊಂಡು ಫೀರೋಝ್ ಹಝ್ರತ್ ಅಬೂಬಕರ್(ರ)ರೊಡನೆ ಹೀಗೆ ವಿನಂತಿಸಿಕೊಂಡರು: ನಮಗೆ ಸಹಾಯ ನೀಡಿರಿ, ನಾವು ಇಸ್ಲಾಮಿಗಾಗಿ ಎಲ್ಲ ತ್ಯಾಗಗಳನ್ನು ಮಾಡಲು ತಯಾರಿದ್ದೇವೆ.

ಹಝ್ರತ್ ಅಬೂಬಕರ್(ರ) ರೂಪಗೊಳಿಸಿದ ಹನ್ನೊಂದು ಸೈನ್ಯಗಳಲ್ಲಿ ಕೊನೆಯ ಸೈನ್ಯ ಮದೀನದಿಂದ ಯಮನಿನ ಕಡೆಗೆ ಹೊರಟಿತು. ಮಾರ್ಗದಲ್ಲಿ ಅನೇಕ

ಗೋತ್ರಗಳ ಜನರು ಅವರ ಸೈನ್ಯದಲ್ಲಿ ಸೇರಿಕೊಂಡರು. ಈ ಬಹಳ ದೊಡ್ಡದಾದ ಸೈನ್ಯ ಮುಂದಕ್ಕೆ ಸಾಗುತ್ತಲೇ ಹೋಯಿತು.

(ಖುತ್ಬದ ಕೊನೆಯಲ್ಲಿ,) ಅಮ್ರ್ ಬಿನ್ ಮಅ್‌ದಿ ಕರಬ್ ಮತ್ತು ಖೈಸ್ ಬಿನ್ ಮಕ್‌ಶೂಹ್‌ನ ಬಂಧನ, ಅವರಿಬ್ಬರನ್ನು ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಾಜರುಪಡಿಸಿದ್ದು, ಅವರಿಬ್ಬರೊಡನೆ ನಡೆಸಲಾದ ವಿಚಾರಣೆ, ಅವರಿಗೆ ಕ್ಷಮಾಪಣೆ ನೀಡಿ ಅವರನ್ನು ಸ್ವತಂತ್ರಗೊಳಿಸಿದ್ದು, ಅವರನ್ನು ಅವರ ಗೋತ್ರಗಳಿಗೆ ಒಪ್ಪಿಸಿದ್ದು ಮತ್ತು ಅವರನ್ನು ಸ್ವತಂತ್ರಗೊಳಿಸಿದ ಕಾರಣದಿಂದ ನಂತರ ಕಾಲದಲ್ಲಿ ಉಂಟಾದ ದೀರ್ಘಕಾಲೀನ ಪ್ರಭಾವಗಳ ಬಗ್ಗೆ ಹುಝೂರ್ ಪ್ರಸ್ತಾಪಿಸಿದರು.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ط وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَاْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ o اُذْکُرُوا اللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 08-07-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon